
# ನೇಸರು

ತಿಂಗಳೋಲೆ

ಮೈಸೂರು ಅಸೋಸಿಯೇಷನ್ ಮುಂಬೈ

NESARU TINGALOLE Vol. VIII No. 8 ಆಗಸ್ಟ್ 1990



Ganapathi in an unusual standing pose ina temple at Gokarna.

The Mysore Association, Bombay

393, Bhau Daji Road, Matunga, Bombay - 400 019. Tel: 4374647/4379574 Grams: "KARUNADU"

# ಮನೋಲ್ಲಾಸ

- ಶ್ರೀಮತಿ ಸುಶೀಲಾ ಆಚಾರ್ಯ

ವಾರಕೊಮ್ಮೆ ನಾವು ಎಂದರೆ 5 - 6 ಜನ ಸ್ನೇಹಿತೆಯರು ಸೇರಿ ಎರಡು ಗಂಟೆ ಕಾಲ ಸಂಗೀತದ ಸವಿಯನ್ನು ಸೇವಿಸುವ ಪದ್ಧತಿಯನ್ನಿಟ್ಟುಕೊಂಡಿದ್ದೇವೆ. ಹೃದಯಕ್ಕೂ ಒಳ್ಳೆಯದು, ಅದರ ಕಾರಣದಿಂದ ದೇಹಕ್ಕೂ ಒಳ್ಳೆಯದು,- ಇವೆರಡರ ಕಾರಣದಿಂದ ಮನಸ್ಸಿಗೂ ಒಳ್ಳೆಯದು - ಎಂದು ನಾವು ನಿಜಕ್ಕೂ ಕಂಡು ಹಿಡಿದಿದ್ದೇವೆ. ಎರಡೂವರೆ ವರ್ಷದ ಮೊದಲು ನಾವೆಲ್ಲ ಸೇರಲು ನಿರ್ಧರಿಸಿದಾಗ, ನಾವು ಇಷ್ಟು ಸಮಯದವರೆಗೂ ಸೇರಿಕೊಂಡಿರುತ್ತೇವೆ ಎಂದು ನೆನಸಿರಲಿಲ್ಲ. ಏನೋ ಆದಷ್ಟು ದಿನ ಸೇರೋಣವೆಂದೇ ನಾವು ಸೇರಿದ್ದು. ಇನ್ನೂ ಬಹಳ ಜನವಿದ್ದರು ( ಮರದಲ್ಲಿ ಹೂಗಳು ಬರುತ್ತವೆ. ಕೆಲವು ಅರಳುವ ಮೊದಲೇ ಬಿದ್ದು ಹೋಗುತ್ತವೆ. ಕೆಲವು ಅರಳಿ ಬೀಳುತ್ತವೆ. ಎಲ್ಲ ಹೂಗಳೂ ಮಿಡಿಗಳನ್ನು ಬಿಡುವುದಿಲ್ಲ. ಎಲ್ಲ ಮಿಡಿಗಳೂ ದೊಡ್ಡದಾಗಿ ಕಾಯಾಗಿ ಹಣ್ಣಾಗುವುದಿಲ್ಲ. ಎಲ್ಲಾ ಹಣ್ಣುಗಳೂ ಪಕ್ಷಿಗಳ ಹಾವಳಿಯಿಂದ ಉಳಿದು ದೇವರಿಗೆ ನೈವೇದ್ಯವಾಗುವುದಿಲ್ಲ. ಈ ಉದಾಹರಣೆಯನ್ನು ಕೊಟ್ಟರೆ ತೀರ ಅತಿ ಎನಿಸೀತು. ಆದರೆ ಬೇರೆ ಉದಾಹರಣೆಗಳು ಸಿಗುವುದು ಕಷ್ಟವೆಂದೇ ಈ ಉದಾಹರಣೆಯನ್ನು ತೆಗೆದುಕೊಳ್ಳಬೇಕಷ್ಟೆ ! ಎಂದೇ ಬರೆದೆ - ಇನ್ನೂ ಬಹಳ ಜನವಿದ್ದರು - ಎಂದು ) ಒಬ್ಬೊಬ್ಬರಿಗೆ ಒಂದೊಂದು ಕಾರಣ. ಪತಿದೇವರು ಬೇಗ ಮನೆಗೆ ಬರುತ್ತಾರೆ. ಮಕ್ಕಳು ಮನೆಗೆ ಬರುವಾಗ ಮನೆಗೆ ಬೀಗ ಹಾಕುವುದು ಸರಿಯಲ್ಲ. ಆರೋಗ್ಯ ಸರಿಯಿಲ್ಲ ಮನೆಯವರಿಗೆ ಮಾಡಿ ಹಾಕಲು ಸಮಯ ಸಿಗುವುದಿಲ್ಲ. - ನೂರಕ್ಕೆ ನೂರು ಸತ್ಯ ಆದರೆ ನೂರಕ್ಕೆ ನೂರನ್ನೂ ಸುಳ್ಳುಮಾಡಿ ನಾವು ಕೆಲವರು ಒಂದಾಗಿ ಸೇರಿ ಸಂಗೀತದ , ಅದರಲ್ಲೂ ಭಾವಗೀತೆ ಹಾಗೂ ಭಕ್ತಿಗೀತೆಗಳ ಸವಿಯನ್ನು ಸೇವಿಸುವ ಅದೃಷ್ಟಶಾಲಿಗಳಾಗಿದ್ದೇವೆ ಎಂದರೆ ಯಾರಾದರೂ ಮೂಗಿನ ಮೇಲೆ ಕೈಯಿಡುವ ಮಾತಾದೀತು. ವಾರದಲ್ಲಿ ಒಮ್ಮೆ ಸಿಗುವ ಎರಡು ಗಂಟೆಗಳು ಎಷ್ಟು ಬೇಗ ಕಳೆದು ಹೋಗುತ್ತವೆಯೋ ಗೊತ್ತಾಗುವುದಿಲ್ಲ. ಭಕ್ತಿಗೀತೆಗಳನ್ನು ಹಾಡುತ್ತಾರೆ ಅದರ ಭಾವ, ಅರ್ಥಗಳನ್ನು ಪರಿಗ್ರಹಿಸಿ ಅವುಗಳನ್ನು ಪುನರಾವರ್ತಿಸಿದಾಗ, ಪ್ರತಿ ಸಲವೂ ಬೇರೆ ಬೇರೆ ಹೊಸ ಅರ್ಥಗಳು ಹೊಳೆಯುತ್ತವೆ. ಅವುಗಳ ರಚಯಿತರು ಎಷ್ಟು ಪುಣ್ಯ ಮಾಡಿದ್ದರೋ ಎಂದೇ ಅಂತಹ ಪದ್ಯಗಳನ್ನು ಬರೆಯಲು ಸಾಧ್ಯವಾಯಿತು ಎಂದು ತೋರುತ್ತದೆ. ಭಕ್ತಿಗೀತೆಗಳಲ್ಲಿ ವೇದಾಂತದ ಅಂಶವೇ ಹೆಚ್ಚಾಗಿರುತ್ತದೆ. ವೇದಾಂತವನ್ನು ಕಲಿಯಲಾಗದವರು ಭಕ್ತಿಗೀತೆಗಳನ್ನು ಹಾಡಿದರೆ ಭಗವಂತನ ಸಾನ್ನಿಧ್ಯವು ಸಿಕ್ಕಿಯೇ ಸಿಗುತ್ತದೆ. ದೇವರು ಯಾರು, ಎಲ್ಲಿಂದ ಬಂದರು, ನಾವು ಯಾರು, ನಮ್ಮ ಜಗತ್ತಿನ ಸೃಷ್ಟಿಗೆ ಏನು ಕಾರಣ ಎಂದೆಲ್ಲ ಯೋಚಿಸಿ, ಯೋಚಿಸಲಾರದೆ ಅಥವಾ ಗುರಿಕಾಣಲಾರದೇ ತಲೆ ಕೆಡಿಸಿಕೊಳ್ಳುವದಕ್ಕಿಂತ ಕಾಣದ ಒಂದು ಕಾರಣಕ್ಕೆ ತಲೆಬಾಗಿ, ಅದನ್ನು ನೆನೆದು, ಧ್ಯಾನಿಸಿ, ವಿಧೇಯತೆ, ತೋರಿಸುವುದೇ ಒಳಿತು.

ಸಂಗೀತದಲ್ಲಿ ಹಲವು ವಿಧಗಳಿವೆ. ನಮ್ಮ ಉದ್ಧಾರಕ್ಕಾಗಿ, ನಮ್ಮ ಮನರಂಜನೆಗಾಗಿ, ನಮ್ಮ ಹೃದಯ ವಿಕಾಸಕ್ಕಾಗಿ ಅವುಗಳನ್ನು ಉಪಯೋಗಿಸಿಕೊಳ್ಳಬೇಕು. ಅರ್ಥವಿಲ್ಲದ ಅಥವಾ ಬರೇ ಶಬ್ದಗಳ ಆಡಂಬರಕ್ಕಾಗಿಯೇ ಅಥವಾ ಅತಿ ಬುದ್ಧಿವಂತಿಕೆಯನ್ನು ತೋರಿಸಲಿಕ್ಕೆ ಹೋಗಿ, ಅನರ್ಥದತ್ತ ಕೊಂಡೊಯ್ಯುವ ಸಂಗೀತವೂ ಇದೆಯೆನ್ನಿ. ಕ್ಷಣಿಕ ಸಂತೋಷದ ಲಾಲನೆಗಾಗಿ ನಾವು ಚಿರ ಸಂತೋಷವನ್ನು ಬಿಟ್ಟು ಕೊಡುವುದು ಉಚಿತವಿಲ್ಲ. ಹೊಲಸು ಅರ್ಥ ಹುಟ್ಟಿಸುವ ಮತ್ತು ನಮ್ಮನ್ನು ಕ್ಷಣ ಕಾಲಕ್ಕಾದರೂ ಬಣ್ಣದ ಜಗತ್ತಿನೆಡೆಗೆ ಆಕರ್ಷಿಸುವ ಸಂಗೀತದತ್ತ ಒಲವು ತೋರಿಸುವುದೂ ಸರಿಯಲ್ಲ. ಸಂಗೀತವನ್ನು ಹಾಡಲು ಉತ್ತಮ ಮಟ್ಟದ ಸ್ವರ ಜ್ಞಾನದ ಅಗತ್ಯವೂ ಇಲ್ಲ. ಅವೆಲ್ಲ ಸಭೆಗಳಲ್ಲಿ ಹಾಡಲು ಉಪಯೋಗಕ್ಕೆ ಬರುತ್ತವಷ್ಟೆ. ಒಟ್ಟಿನಲ್ಲಿ ನಮ್ಮ ಗೀತೆಗಳಲ್ಲಿ ಭಕ್ತ್ಯಾವೇಶಗಳಿರಬೇಕು. ಕೇಳಿದರೆ ಇನ್ನೂ ಕೇಳುವಂತಿರಬೇಕು. ಉಳಿದವರನ್ನು ನಮ್ಮತ್ತ ಸೆಳೆಯುವ ಶಕ್ತಿಯಿರಬೇಕು. ನಮ್ಮ ಸಂಗೀತದ ಬೆಳಕು ಇತರರ ಮೇಲೆ ಬಿದ್ದು ಆ ಬೆಳಕಿನಲ್ಲಿ ಅವರು ತಮ್ಮ ಹೃದಯ ಕನ್ನಡಿಯಲ್ಲಿಮುಖ ಕಾಣುವಂತಿರಬೇಕು. ಭಕ್ತಿ ಪದ್ಯಗಳಲ್ಲಿ ಹಲವು ವಿಧದ ರಸಗಳಿವೆ. ಭಕ್ತಿ ರಸವೇ ಮುಖ್ಯವೆನಿಸಿದರೂ ದಾಸರುಗಳ ಹಲವು ರಸಗಳಿಂದ ವರ್ಣನೆ ಮಾಡಿದ್ದಾರೆ. ತಾಯಿಯ ಜೊತೆಗೆ ಮಗುವು ಜಗಳ ಮಾಡುವಂತೆ , ' ನಿನಗೆ ಅವನು ಮಾತ್ರ ಹತ್ತಿರದವನೇ ? ನಾನೇನು ಮಾಡಿದೆನೆಂದು ನನ್ನನ್ನೂ ದೂರೀಕರಿಸುತ್ತೀ ' ಎನ್ನುತ್ತಾನೆ. ಇನ್ನೊಮ್ಮೆ ನಿನ್ನನ್ನು ನಾನಲ್ಲದಿದ್ದರೆ ಬೇರೆ ಯಾರು ಹೊಗಳಿ ಹಾಡುತ್ತಿದ್ದರು ? ಆದರೆ ನೀನು ನನಗೆ ಒಲಿಯುವುದಿಲ್ಲವಲ್ಲ ? ಎಂದು ಕುಹಕ ಮಾಡುತ್ತಾರೆ. ಮತ್ತೊಮ್ಮೆ ' ಅಯ್ಯೋ , ನಿನಗೇನಿದೆ ? ಬಡವ ನೀನು, ಮಲಗಲು ಹಾಸಿಗೆಯಿಲ್ಲ, ಸರಿಯಾದ ವಾಹನವಿಲ್ಲ, ತಂದೆ - ತಾಯಿಗಳಿಲ್ಲ, ಆದರೂ ನೀನು ' ಹರಿ ' ಎಂಬ ಮಾತಿಗೆ ಮರುಳಾಗಿದ್ದೇನೆ ' ಎನ್ನುತ್ತಾರೆ. ಇನ್ನೂ ಮುಂದುವರೆಸಿ, ' ನೀನು ಚೋರ ' ಜಾರ ಕಪಟಿ, ಎಂದೆಲ್ಲ ಬಯ್ಯುತ್ತಾರೆ. ಗೋಪಿಯೊಂದಿಗೆ ದೂರು ತರುತ್ತಾರೆ. ಅವನನ್ನು ಹೊಡೆಸಿ ಕಟ್ಟಿ ಹಾಕಿಸುತ್ತಾರೆ. ಆಹಾ ! ಎಂಥಹ ಅಮೋಘ ಭಕ್ತಿ ಇದು ! ವರ್ಣಿಸಲಸಾಧ್ಯ.

ಅಂತೂ ನಮ್ಮ ಸಂಗೀತದಲ್ಲಿ ಗಾಂಭೀರ್ಯವಿದೆ. ಮಾಧುರ್ಯವಿದೆ. ಸನ್ಮಾರ್ಗದತ್ತ ತೆರಳಲು ಸಂದೇಶವಿದೆ. ಯುಗ ಯುಗಗಳು ಕಳೆದರೂ ನಿತ್ಯ ನೂತನವೆನಿಸುವ ಸಂಗೀತವು ಯಾರಿಗೆ ಬೇಡ ? ಹಾಡಲು ಸ್ವರವಿಲ್ಲದಿದ್ದರೂ , ಸಂಗೀತದೊಂದಿಗೆ ನಾವು ವಿಲೀನವಾದರೆ, ತನ್ಮಯವಾಗಿದ್ದರೆ,ಅದೇ ಒಂದು ಹಾಡಾದೀತಲ್ಲವೇ ? ನಮ್ಮಲ್ಲಿ ಭಾರತಿಯಂತಹ ನಿಷ್ಠಾವಂತ ನಾರೀಮಣಿಯಿದ್ದರೆ, ಸ್ವರ್ಣ ರತ್ನರಂತಹರಿಂದ ನಮ್ಮ ಭಾಂಡಾರವು ತುಂಬಿದೆ. ಅನಸೂಯೆಯಂತಹ ರಮಣೀ ಮಣಿಯಿದ್ದಾರೆ. ವೈದ್ಯ ವೃತ್ತಿಯಲ್ಲಿದ್ದರೂ ಭಕ್ತಿ ಸಂಗೀತವೆಂದರೆ ಎಲ್ಲಾದರಲ್ಲಿಗೆ ಹೋಗುವ , ಆ ಸಂಗೀತವನ್ನು ಮೆಚ್ಚುವ ಸುಬ್ಬಲಕ್ಷ್ಮೀಯವರಿದ್ದಾರೆ. ಎಲ್ಲಾದರೂ ಕರುಬಬೇಡ, ಸಾಧ್ಯವಾದರೆ ನೀವೂ ಒಂದೊಂದು ಗುಂಪು ರಚಿಸಿಕೊಂಡು ದೇವರ ನಾಮಗಳನ್ನು ಹಾಡಿಕೊಳ್ಳುತ್ತ ಮನೋಲ್ಲಾಸದಿಂದಿರಿ.

---

## ಅಸೋಸಿಯೇಷನ್ನಿನಲ್ಲಿ

ಜೂನ್ 30 ರಂದು ಅಸೋಸಿಯೇಷನ್ನಿನಲ್ಲಿ ಸದಸ್ಯರು ಮತ್ತು ಅವರ ಮಕ್ಕಳಿಗಾಗಿ ನಡೆಸಿದ ಆಟ - ಪಾಟಗಳ ಮತ್ತು ಪ್ರತಿಭಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ಹಂಚಲಾಯಿತು. ಅಸೋಸಿಯೇಷನ್ನಿನ ಹಿರಿಯ ಸದಸ್ಯರಾದ ಶ್ರೀ. ಐ. ಎಸ್. ಧುಂಡ್ಸಿ ಅವರು ಬಹುಮಾನಗಳನ್ನು ಹಂಚಿದರು. ಮಕ್ಕಳಿಗೆ ಬಹುಮಾನಗಳೊಂದಿಗೆ ಪ್ರಶಸ್ತಿ ಪತ್ರಗಳನ್ನೂ ಕೊಡಲಾಯಿತು. ನಂತರ ಶ್ರೀ ಸುನೀಲ್ ಕಾಮತ್‌ರವರಿಂದ Magic ಮತ್ತು Ventriloguism ಕಾರ್ಯಕ್ರಮ ಮಕ್ಕಳು ಮತ್ತು ಹಿರಿಯರನ್ನು ರಂಜಿಸಿತು.

---

## ಧ್ವನಿ

' ಧ್ವನಿ ' ಹವ್ಯಾಸಿ ನಾಟಕ ತಂಡ ಮುಂಬಾಯಿ ಇದರ ಐದನೇ ವಾರ್ಷಿಕ ಮಹಾಸಭೆಯು ತಾ. 7-7-1990 ರಂದು ಕರ್ನಾಟಕ ಕಾಲೋನಿ ಮಾಟುಂಗ ಇಲ್ಲಿ ನಡೆಯಿತು. ಸಭೆಯಲ್ಲಿ ಲೆಕ್ಕ ಪತ್ರಗಳ ಪರೀಶೀಲನೆಯ ನಂತರ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

- ಜಯಂತ ಎ. ಶ್ರೀಯಾನ್
ಕಾರ್ಯದರ್ಶಿ

# ಆಗಸ್ಟ ತಿಂಗಳಿನಲ್ಲಿ

## ಸ್ವಾತಂತ್ರ್ಯ ದಿನಾಚರಣೆ

| | | |
|---|---|---|
| ಬೆಳಿಗ್ಗೆ | 9-30 ಕ್ಕೆ | : ಧ್ವಜಾರೋಹಣ |
| ಸಂಜೆ | 6-00 ಕ್ಕೆ | : ಮನೋರಂಜನಾ ಕಾರ್ಯಕ್ರಮ |
| | 7-30 ಕ್ಕೆ | : 'ಹೌಸೀ' ಆಟ |
| | 8-30 ಕ್ಕೆ | : ಹಬ್ಬದೂಟ.<br>ದೊಡ್ಡವರಿಗೆ ರೂ 15/-<br>ಮಕ್ಕಳಿಗೆ ರೂ. 10/-<br>ಹಬ್ಬದೂಟದಲ್ಲಿ ಪಾಲ್ಗೊಳ್ಳುವವರು ಅಸೋಸಿಯೇಷನ್ನಿನ ಕಾರ್ಯಾಲಯದಲ್ಲಿ ಮುಂಚಿತವಾಗಿ ಹೆಸರನ್ನು ಕೂಡಬೇಕಾಗಿ ವಿನಂತಿ. |

## ಶ್ರೀ ಸ್ವರ್ಣಗೌರಿ ಹಾಗೂ ಮಹಾಗಣಪತಿ ಮಹೋತ್ಸವ 1990

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆಯ ಶ್ರೀ ಪ್ರಮೋದ ನಾಮ ಸಂವತ್ಸರದ ಭಾದ್ರಪದ ಶುದ್ಧ ತೃತೀಯ ಗುರುವಾರ ( 23-8-1990 ) ಶ್ರೀ ಸ್ವರ್ಣಗೌರಿಯನ್ನು ಮತ್ತು ಶುಕ್ರವಾರ (24-8-1990) ಮಹಾಗಣಪತಿಯನ್ನೂ ಆವಾಹಿಸಿ, ದ್ವಾದಶಿ ಭಾನುವಾರದ ( 2-9-1990 ) ವರೆಗೆ ಉತ್ಸವವನ್ನು ಅಸೋಸಿಯೇಷನ್‌ನ ಅಶ್ರಯದಲ್ಲಿ ಎಂದಿನಂತೆ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.

ಸ್ವರ್ಣಗೌರಿ, ಮಹಾಗಣಪತಿ ಉತ್ಸವವನ್ನು ನಮ್ಮ ಅಸೋಸಿಯೇಶನನಲ್ಲಿ ಅನೇಕ ವರ್ಷಗಳಿಂದ ತಪ್ಪದೆ ನಡೆಸಿಕೊಂಡು ಬರುತ್ತಿರುವುದು ತಮಗೆಲ್ಲಾ ಗೊತ್ತಿರುವ ವಿಷಯವೇ ಆಗಿದೆ. ಅದರಂತೆ ಪ್ರತಿ ಬೆಳಿಗ್ಗೆ ಅಭಿಷೇಕ, ಅರ್ಚನೆ, ಮಂಗಳಾರತಿಯನ್ನು ಹಾಗೂ ಪ್ರತಿಸಂಜೆ ಸಂಗೀತ ಭಜನೆ, ವಾದ್ಯ ಗೋಷ್ಠಿ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ದಿನಾಂಕ 2-9-1990 ನೇ ಭಾನುವಾರ ಪ್ರಾತಃಕಾಲ ವೇದಮಂತ್ರ, ಪಾರಾಯಣದೊಂದಿಗೆ ಸಕಲ ಪೂಜಾದಿ ಸೇವೆಗಳನ್ನು ಸಲ್ಲಿಸಿ , ಮಹಾಮಂಗಳಾರತಿ , ಮೆರವಣಿಗೆಯ ನಂತರ ಗೌರಿ ಗಣಪತಿಯನ್ನು ದಾದರ್ ಸಮುದ್ರ ತೀರದಲ್ಲಿ ವಿಸರ್ಜಿಸಲಾಗುವುದು.

ತಾವುಗಳೆಲ್ಲರೂ ಈ ಮಹೋತ್ಸವದಲ್ಲಿ ಭಾಗವಹಿಸಿ, ಉದಾರ ಧನ ಸಹಾಯ ಮಾಡಿ ಭಗವತ್ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

- ಆಧ್ಯಕ್ಷರು, ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು.

ವಿ ಸೂ. : 1. ಸೇವಾರ್ಥ ನಡೆಸಲಿಚ್ಛಿಸುವವರು ಕನಿಷ್ಟ 101 /- ರೂಗಳ ಕಾಣಿಕೆಯೊಂದಿಗೆ ತಮ್ಮ ಹೆಸರನ್ನು ಗೌ। ಕಾರ್ಯದರ್ಶಿಗಳಿಗೆ ತಿಳಿಸಬೇಕಾಗಿ ವಿನಂತಿ.

2. ಗೌರಿ ಪೂಜೆಯಲ್ಲಿ ಭಾಗವಹಿಸಲು ಬಯಸುವ ಹೆಂಗಳೆಯರು ತಮ್ಮ ಹೆಸರುಗಳನ್ನು ತಾ. 21-8-1990 ರ ಮೊದಲೇ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಕೋರಿಕೆ.

3. ಪೂಜಾಕಾರ್ಯದ ಅಂಗವಾಗಿ ನಡೆಸುವ ಪ್ರತಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಲಿಚ್ಛಿಸುವ ಸದಸ್ಯರು ರೂ 500 ರನ್ನು ತಮ್ಮ ದೇಣಿಗೆಯಾಗಿ ಕೊಡಬೇಕೆಂದು ವಿನಂತಿ.

## PAINTING EXHIBITION

DURING THE MAHA-GANAPATHI POOJA AN EXHIBITION OF PAINTINGS OF LORD GANESHA BY OUR MEMBER SRI N. C. DESAI IS BEING ORGANISED.

## ATTENTION TREKKING ENTHUSIASTS

ASSOCIATION IS PLANNING A TREK IN THE MONTH OF SEPTEMBER, 1990, AROUND 8, 9TH DETAILS ARE BEING FINALISED. THOSE INTERESTED ARE REQUESTED TO CONTACT ASSOCIATION OFFICE FOR FURHER DETAILS.

FOR ALL YOUR DOMESTIC AND INTERNATIONAL TRAVEL ARRANGMENTS CONTACT

**AUGUST TRAVEL SERVICE**

Agents For

इंडियन एयरलाइन्स
Indian Airlines
वायुदुत
Vayudoot

**REGD. OFFICE :**
3/15 ASHIANA SECTOR - 17
VASHI - NEW BOMBAY
0215/682558-591
**ALSO AT :** GRAMS : AUGTRASERV

2/16 KABBUR HOUSE
SION(E) BOMBAY 400 022.
4077750-2984/4093573

# ಹಾರೋಸ್ಕೋಪು

- ಡಾ.ಮಂಜುನಾಥ್

ಗಂಡು ಹೆಣ್ಣಿನ ಸಂಬಂಧ ನಿಸರ್ಗದತ್ತವಾದದ್ದು, ಪುರುಷ ಪ್ರಕೃತಿ ಅಂತಾ ಕೊಚ್ಕೋದಲ್ಲದೆ ಭಾರತೀಯ ಸಂಸ್ಕೃತಿ ಅನಾದಿಕಾಲದ್ದು ಅಸಾಮಾನ್ಯವಾದದ್ದು ಅಂತ ಕೊಚ್ಕೋಳ್ಳೋದು ನಾವು ಹಲವಾರು ಶತಮಾನಗಳಿಂದ ನಮ್ಮ ಸುತ್ತುಮುತ್ತ ಕೇಳಿ ಕೇಳಿ ನಮ್ಮಗಳ ಕಿವಿ ತೂತು ಹೊಡೆಸ್ಕೊಂಡಿದೀವಿ. ಕಳೆದ ಐವತ್ತು ವರ್ಷಗಳಿಂದ ಇನ್ನೊಂದು ಹೊಸ ಸೋಗು ಹೆಚ್ಚಾಗಿದೆ. ಇದು ಮಾಡರ್ನಿಟಿ ಅಥವಾ ಆಧುನಿಕತೆಯ ಸೋಗು. ನಾವು ಹಳೆಯಕಾಲದ ಗೊಡ್ಡುಗಳಲ್ಲ, ನಾವೆಲ್ಲ ಎಜುಕೇಟೆಡ್ ( ಕಲಿತವರು, ಅನ್ನೋದು ಹಳೆಯಮಾತಾಯ್ತು), ಜಾತಿ-ಪಾತಿ-ಅನ್ನೋ ಹಂಗಿಲ್ಲ - ಎನ್ನುವ ಸೋಗು ಆದರೆ ನಮ್ಮ ಜುಟ್ಟು ಇನ್ನೂ ಹೋಗಿಲ್ಲ, ಅದು ತಲೆಯ ಮೇಲೆ ಶೋಭಿಸ್ತಾ ಇಲ್ಲ, ತಲೆ ಒಳಗೆ ಇನ್ನೂ ಇದೆ ಅನ್ನೋದಕ್ಕೆ ಜಾತಕ ಅಥವಾ "ಹಾರೋಸ್ಕೋಪು" (ಬಯಾಸ್ಕೋಪಿನ ಅಣ್ಣ) ಒಂದು ಕುರುಡು.

ನಮ್ಮ ಅಪ್ಪ ಅಮ್ಮಂದಿರು ಮದುವೆಯಾದ ಕಾಲಕ್ಕೆ ಜಾತಕ ಹಿಡ್ಕೊಂದು ಮಧ್ಯಸ್ಥಿಗಿರು ಊರಿಂದ ಊರಿಗೆ ಓಡಾಡ್ತಿದ್ರಂತೆ. ಯಾರೋ ಒಬ್ಬರು ಮನೇಲಿ ವಯಸ್ಸಿಗೆ ಬಂದ ಹುಡುಗನೋ ಹುಡುಗಿಯೋ ಇದ್ರೆ, ಅವರ ಮನೆತನದ ಹಿಂದೆ ಮುಂದೆ ತಿಳ್ಕೊಂಡು ಅವರ ಮನೆಗೆ ಹೋಗಿ ಜಾತಕ ಕೊಟ್ಟು ಅವರ ಜಾತಕ ಇಸ್ಕೊಂಡು ಬರ್ತಿದ್ರು, ಜಾತಕ ಸರಿಹೋದ ಮೇಲೆ ತಂದೆ ತಾಯಿ ಹುಡುಗನ ನೋಡ್ತಿದ್ರು. ಅದರೆ ಈಗ ಅಪ್ಪ ಅಮ್ಮ ಮಾಡರ್ನ್ಆಗಿದಾರೆ ಜಡೆಗಳು ಮೇಲಕ್ಕೆ ಹೋಗಿವೆ. ಜುಟ್ಟುಗಳು ಒಳಗೆ ಅಡಗಿವೆ ಆದ್ದರಿಂದ ಬಾಟಲ್‌ಗಳೂ ಹೊಸದಾಗಿ ಬೇಕಾಗಿವೆ ಇವುಗಳನ್ನು ಈಗ ಪರಾಮರ್ಶಿಸೋಣ.

**1. ಅಯ್ಯೋ ನಮಗೆ ಜಾತಕದ 'ಲ್ಲಿ ನಂಬಿಕೆ ಇಲ್ಲಪ್ಪ :**

ನಮ್ಮ ಮನೇಲಿ ಹುಡುಗೀರ್ಗೆ ಮದುವೆಯಾಗಬೇಕಾದ್ರೆ, ನಮಗೆ ಜಾತಕದಲ್ಲಿ ನಂಬಿಕೇನೇ ಇರೋಲ್ಲ. "ನಾವು ಬರೀ ಗೋತ್ರ-ನಕ್ಷತ್ರ ನೋಡ್ತೀವಪ್ಪ. ಹಾಗೆ ನೋಡಿದ್ರೆ ನಮ್ಮ ಸುಮಂಗೆ ನಾವು ಜಾತಲಾನೇ ಬರೆಸಿಲ್ಲ. ಅವಳದ್ದು ಅನುರಾಧ ನಕ್ಷತ್ರ, ಮಹಾನಕ್ಷತ್ರ. ನಮ್ಮ ಮಾವನವರೇ ಜಾತಕ ನೋಡ್ತಾ ಇರ್ಲಿಲ್ಲ.

**2.ನಮಗಿಲ್ಲಪ್ಪ ಆದರೆ :**

ನಮ್ಮ ಮನೇಲಿ ಹುಡುಗೀಗೆ ಮುಗಿದು ಹುಡುಗನ ಸರದಿ ಬಂದಾಗ, ಹಾಡು ಈ ರಾಗದಲ್ಲಿ. " ನಮಗಿಲ್ಲಪ್ಪ, ಆದರೆ ಮನೇಲಿ ದೊಡ್ಡವರಿದ್ದಾರಲ್ಲ". "ಮಾವನವರು ಇಲ್ಲಾಂದ್ರಿ ? " " ಆದರೆ ನಮ್ಮತ್ತೆ ಇದಾರಲ್ಲ, ಅವರು ನೋಡ್ಬೇಕೂಂತಾರೆ. ಅವರಿಗೆ ಯಾಕೆ ಬೇಜಾರು ಮಾಡ್ಬೇಕೂಂತ ಅಷ್ಟೇ. ನೀವು ಜಾತಕ ಆಮೇಲೆ ಫೋಟೋ ಕೊಟ್ಬಿರಿ ನಾವು ತೋರಿಸ್ತೀವಿ". ಇದರಲ್ಲಿ ಗಂಡಿನವರೇ ಜಾತಕ ತೋರಿಸ್ಬೇಕು ಹೆಣ್ಣಿನವರು ತೋರ್ಸಿದರೆ ಆಗೋಲ್ಲ.

**3. ಜಾತಕ ನೋಡಿ ಮಾಡಿದ ಮದು-ವೆಗಳೆಲ್ಲಾ ಏನು ನೆಟ್ಟಗಾಗಿವೆಯೇ:**

"ಇಲ್ಲ ಆದರೆ ನೋಡಿ ಎಷ್ಟೋ ಸಲ ಜಾತಕಗಳನ್ನು ಸರಿಯಾಗಿಯೇ ಬರೆದಿರೋಲ್ಲ. ಹುಟ್ಟಿದ ಟೈಮ್‌ನ ಸರಿಯಾಗಿ ರೆಕಾರ್ಡ್ ಮಾಡಿರೋದೇ ಇಲ್ಲ. ಅದು ಬಹಳ ಇಂಪಾರ್ಟೆಂಟು. ತಲೆ ಈಚೆಗೆ ಬಂದಾಗ ಟೈಮ ರೆಕಾರ್ಡ್ ಮಾಡ್ಬೇಕು." ( ಈ ಮಾತಂತೂ ನಿಜ, ತಲೆ ಈಚೆಗೆ ಬಂದಾಗಲೇ ಜಾತಕ ನೋಡೋಕೆ ಶುರು ಮಾಡೋದು, ಇದ್ದ ಕಡೆ ಇದ್ದಾಗ ಆ ಯೋಚನೆ ಇರೋಲ್ಲ). "ಹೀಗಾಗಿ ಆಮೇಲೆ ಅನರ್ಥವಾಗುತ್ತೆ. ಜಾತಕ ಸರಿಯಾಗಿ ಹಾಕಿದ್ರೆ, ಅದರಲ್ಲಿದ್ದಾಗೆ ಚಾಚೂ ತಪ್ಪದ್ದಾಗೆ ಆಗುತ್ತೆ. ನಮ್ಮ ಹರದನ ಕೆರೆ ಶಾಮಣ್ಣನವರು ನಮ್ಮ ತಂದೆ ಜಾತಕ, ನನ್ನ ಜಾತಕ ಎಲ್ಲಾ ವಿವರವಾಗಿ ಬರೆದಿದ್ದಾರೆ. ಅದರಲ್ಲಿ ಅವರು ಬರೆದಿರೋದೆಲ್ಲಾ ಅಕ್ಷರಶಹ ಸತ್ಯ." ಇಷ್ಟಾಗಿ ಹರನಕೆರೆ ಶಾಮಣ್ಣನವರಿಗೆ ತಮ್ಮ ಭವಿಷ್ಯವೇ ಗೊತ್ತಿರಲಿಲ್ಲ. ಮಗನ ಓದಿಸಿ ಮದುವೆ ಮಾಡಿಸಿ ಹಾಯಾಗಿರ್ತೀನಿ ಅಂದ ಮನುಷ್ಯನ್ನ, ಮಗ ಮನೆಯಿಂದ ಹೊರಗೆ ಹಾಕಿದ. ಸಾಯೋ ಹೊತ್ತಲ್ಲಿ ಆದು ಯಾರೋ ಬೇರೆಯವರ ಅಂಗಳದಲ್ಲಿ ಮೂರು ದಿನ ನರಳಿ ಸತ್ತಿತು.

**4. "ಹಾಗಲ್ಲ ಸಾರ್ ಜಾತಕ ಒಂದು ಸ್ಟಾಟಿಸ್ಟಿಕಲ್ ಕಂನ್ಸೆಪ್ಟು" :**

" ಹೀಗೆ ಆಗುತ್ತೆ ಅಂತ ಅರ್ಥ ಅಲ್ಲ, ಏನು ಆಗಬಹುದೂಂತ ಪ್ರಾಬಬಲಿಟಿ ತೋರಿಸುತ್ತೆ ಅಷ್ಟೇ. ನಾವು ಅದನ್ನ ಇಂಟರೀಪ್ರಟ್ ಮಾಡ್ಕೊಂಡು ನಮಗೆ ಬೇಕಾದ್ದನ್ನ ಛೂಸ್ ಮಾಡ್ಕೋಬಹುದು". ಇವರು ತಾವು ತೊಟ್ಟಿರೂ ಮಾಡರ್ನ್ ಸಫಾರಿಯನ್ನ ಜಾತಕಕ್ಕೂ ತೊಡಿಸೋಕೆ ಪ್ರಯತ್ನ ಪಡ್ತಿದಾರೆ ಇವರಿಗೆ ಬುದ್ಧಿ ಇರಬೇಕಾದ ಕಡೆ ಇಲ್ಲ ಅನ್ನೋದಕ್ಕೆ ಇವರು ಬಾಯಲ್ಲಿಟ್ಟುಕೊಂಡು ಚಿಪ್ತಾ ಇರೋ ಸಿಗರೇಟೇ ಸಾಕ್ಷಿ. ಲಂಗ ಕ್ಯಾನ್ಸರ್ ಬರೋದು ಪ್ರಾಬಬಲಿಟಿ ಅಲ್ಲ. ಸರ್ಟನಿಟಿ ಅಂತ ಗೊತ್ತಿದ್ದೂ ಸೇದೋ ಮನುಷ್ಯಂಗೆ ಜಾತಕದ ಪ್ರಾಬಬಲಿಟಿ ಏನು ಸಹಾಯ ಮಾಡಬಹುದು, ಆದರೆ ಇವರಿಗೆ ಸ್ಟಾಟಿಸ್ಟಿಕ್ಸ್ ಹೆಸರಾದರೂ ಗೊತ್ತಿದೆ ಅನ್ನೋದು ನಮಗೆ ತಿಳಿದಿದೆ.

**5. ಹಾಗಲ್ಲಪ್ಪ ಇದು ನಮ್ಮ ಟ್ರೆಡಿಷನ್ನು, ಇಂಡಿಯಾದಲ್ಲಿ ಜಾತಕ ಇಲ್ಲದೆ ಯಾರೂ ಮಾಡೋಲ್ಲ:**

ಓಹೋ ಟ್ರೆಡಿಷನ್ನು, ಶ್ರೀರಾಮಚಂದ್ರ ಸೀತಾದೇವಿನ ಮದುವೆಯಾಗೋಕೆ ಮುಂಚೆ ಜಾತಕ ನೋಡಿದ ಅಂತ ವಾಲ್ಮೀಕಿ ರಾಮಾಯಣದಲ್ಲೇ ಬರೆದಿದೆ. ಇನ್ನು ದಮಯಂತಿ ದ್ರೌಪದಿ, ಸಾವಿತ್ರಿಯರ ಕಥೆಗಳಂತೂ ಬಿಡಿ, ನಮ್ಮ ಮಿಸೆಸ್ ಜಯಕುಮಾರ್ ಶಾಂಡಿಲ್ಯ ಹೇಳಿದ ಹಾಗೆ ಅವರು ಜಾತಕ ನೋಡದೇನೇ ಮದುವೆ ಮಾಡ್ಕೋಂಡಿದ್ದಕ್ಕೆ ಅವರಿಗೆ ಆ ಗತಿ ಆಗಿದ್ದು. ಟ್ರೆಡಿಷನ್ನು ಅಂತ ಕೊಚ್ಚೋ ಭೂಪತಿಗಳು ಈ ಟ್ರೆಡಿಷನ್ನು ಎಷ್ಟು ಕಾಲದ್ದು? ಅದಕ್ಕೆ ಶಾಸ್ತ್ರ ಸಮರ್ಥನೆ ಇದೆಯೇ ಅನ್ನೋದನ್ನ ಮರೆತೇ ಬಿಡ್ತಾರೆ. ನಮ್ಮ ಹಿಂದೂ ಪುರಾಣ, ಕಾವ್ಯಗಳಲ್ಲಿ ಬರೋ ಯಾವ ಕಥೆಯಲ್ಲಿಲ್ಲಾ ಜಾತಕ ನೋಡಿ ಮದುವೆ ಮಾಡ್ತಿದ್ರು ಅನ್ನೋ ಸಮರ್ಥನೆ ಇಲ್ಲ. ಹೆಣ್ಣು ರೂಪವತಿಯಾಗಿದ್ರೆ, ವೀರನಾದ ಯುವಕ ಪಂದ್ಯದಲ್ಲಿ ಗೆದ್ದು ಅವಳನ್ನು ಮದುವೆಯಾಗ್ತಿದ್ದ. ಈಗ ಯುವಕರು ವೀರರಾಗಿಲ್ಲವಾದ್ದರಿಂದ ಅವರಲ್ಲಿ ನೋಡಬೇಕಾದ್ದನ್ನ ನೋಡೋದನ್ನ ಬಿಟ್ಟು, ಜಾತಕ ನೋಡಬೇಕಾಗುತ್ತೆ.

ಇನ್ನು ಇಂಡಿಯಾದಲ್ಲಿ ಎಲ್ಲರೂ ಜಾತಕ ನೋಡ್ತಾರೆ ಅನ್ನೋ ಮಾತು, ಮೊದಲು ಕೇವಲ

ಬ್ರಾಹ್ಮಣರಿಗೆ, ಕ್ಷತ್ರಿಯರಿಗೆ , ವೈಶ್ಯರಿಗೆ ಇದ್ದರೋಗ' ಇತ್ತೀಚಿಗೆ ಉಳಿದ ಶೇಕಡ 65 ರಷ್ಟು ಜನಾಂಗಕ್ಕೆ ಹಬ್ಬುತ್ತಿದೆ. ಈ ಜನಾಂಗ ಮೊದಲು ಜಾತಕಾನೂ ಬರಸ್ತಿರಲಿಲ್ಲ, ಮದುವೆಗ ನೋಡ್ತಾನೂ ಇರ್ಲಿಲ್ಲ. ಭೂಮಿ ಕಾಣಿ ಮಾಡ್ಕೊಂಡು ಅನುಕೂಲವಾಗಿ ಗಂಡಹೆಂಡರು ಬಾಳಿವ ಮಾಡ್ತಿದ್ರು. ಅವರಿಗೆ ಯಾವ ಕುಜ ದೋಷವೂ ತಟ್ಟಾ ಇರ್ಲಿಲ್ಲ. ಈಗ ದುರ್ದೈವದಿಂದ ಅವರಿಗೆ ಈ ಮಾಡರ್ನಿಟಿಯ ದೋಷ ತಟ್ಟಾ ಇದೆ. ಒಕ್ಕಲಿಗರೆಲ್ಲಾ ಈ ರೋಗಕ್ಕೆ ಬಲಿಯಾಗ್ತಾ ಇದಾರೆ.

ಇನ್ನು ಹಿಂದೂ ವೇದಾಂತಕ್ಕೆ ಈ ಜಾತಕದ ಹೊಂದಾಣಿಕೆ ಏನೂ ಅನೋದು ವಿಚಾರ ಮಾಡೋದು ಒಳ್ಳೆಯದು. ಎಲ್ಲಾ ಹಿಂದೂ ವೇದಾಂತಗಳೂ ಉಪನಿಷತ್ತುಗಳ ಹಾಗೂ ಭಗವದ್ಗೀತೆಯ ಭಾಷ್ಯದ ಮೇಲೆಯೇ ಅವಲಂಬಿಸಿದೆ. ಆತ್ಮ ಪರಮಾತ್ಮರ ಸಂಬಂಧ ಕೂಡ, ವಿಧಿನಿಯಮದ ಬಗ್ಗೆ ಎಲ್ಲಾ ಹಿಂದೂ ಸಿದ್ಧಾಂತಗಳೂ ಒಮ್ಮತವಾಗಿವೆ. ದ್ವೈತ ಸಿದ್ಧಾಂತವಂತೂ, ಎಲ್ಲಾ ಜೀವಿಗಳೂ ಅಸ್ವತಂತ್ರರು ಎಂದೇ ಸಾರುತ್ತದೆ. ಹೀಗೆ ವಿಧಿನನಿಯಮ ಅಥವಾ ಹಣೆಯಬರಹ ಅಥವಾ ಕರ್ಮ ಆಗಲೇ ನಿರ್ಧಾರವಾಗಿರೋವಾಗ ಮನುಷ್ಯ ಜಾತಕ ನೋಡಿ ಭವಿಷ್ಯ ತಿಳ್ಕೊಂಡ್ರೂ, ಭವಿಷ್ಯಾನ ಮಾರ್ಪಾಡು ಮಾಡೋದು ಸಾಧ್ಯವೇ ಅಂತ ಕೇಳಿದಾಗ ಸ್ಪಷ್ಟ ಉತ್ತರ ನಮಗೆ ದೊರೆಯುತ್ತೆ. ಜಾತಕ ಒಂದು ವಿಜ್ಞಾನ ಅಂತ ಒಂದುಪಕ್ಷ ನಾವು ಒಪ್ಪಿಕೊಂಡರೂ ಕೂಡ ಅದನ್ನ ನೋಡಿ ಭವಿಷ್ಯನ ತಿಳ್ಕೊಳೋ ವಿವೇಕಾನ ದೇವರು ನಮಗೆ ದಯಪಾಲಿಸಿದ್ರೂ, ಭವಿಷ್ಯಾನ ಬದಲಿಸೋ ಸಾಮರ್ಥ್ಯಾನ ಅವನು ನಮಗೆ ಕೊಟ್ಟಿಲ್ಲ. ಹಾಗೆ ತಿಳಿದಿದ್ರೆ, ಅದು ನಮ್ಮ ಡಬಲ್ ಸ್ಟಾಂಡರ್ಡ್ ತೋರಿಸುತ್ತೆ ಅಷ್ಟೆ. ಹಿಂದೂ ಪುರಾಣಗಳಲ್ಲಿ ಇಲ್ಲದೇ ಇರೋ ಹಿಂದೂ ವೇದಾಂತ ವಿರುದ್ಧವಾಗಿರೋ ಪದ್ಧತಿಗಳನ್ನ ಹಿಂಬಾಲಿಸೋ ಜನ ಹಿಂದೂಗಳಲ್ಲ ಅಂತವರ ಮನೆಗೆ ನಮ್ಮ ಹುಡುಗೀರ್ನ ತಾನೇ ಯಾಕೆ ನಾವುಕೊಡೋ ಪ್ರಯತ್ನ ಮಾಡ್ಬೇಕು ಅನ್ನೋ ಪ್ರಶ್ನೆ ಎಲ್ಲಾ ಹಿಂದೂಗಳ ಮನಸ್ಸಿನಲ್ಲಿ ಮೂಡಬೇಕು.


ಹೀಗೆ ವಿಧಿ ಲಿಖಿತದ ಮೇಲೆ ಭರವಸೆ ಹೊಂದಿದ ಜನ ಜಾತಕ ನೋಡಿದ ಮೇಲೆ, ಕುಜದೋಷ ಕಂಡು ಅದರ ಪರಿಹಾರಕ್ಕಾಗಿ ಅವರ ಬೇಳೆ ಉಪ್ಪು ದಾನ ಮಾಡಿದ್ರೆ, ಆ ಕುಜ ಗ್ರಹ ಏನು ಹಿಂದ್ಗಿಂದಕ್ಕೆ ತಿರುಗುತ್ತೆ ? ( ಹಾಗೊಮ್ಮೆ ತಿರುಗೋದಕ್ಕೆ ಮೊದಲು ಮಾಡಿದ್ರೆ, ಆ ಅಮೇರಿಕನ್ ರಷ್ಯನ್ ರಾಕೆಟ್‌ಗಳ ಗತಿ ಏನು?). ಗಂಧರ್ವ ವಿವಾಹವೇ ಸರ್ವ ಶ್ರೇಷ್ಠವೆಂದ ಸಾರುತ್ತಾ, ಆ ದುಷ್ಯಂತ ಶಕುಂತಲೆಯರ ಸಂಬಂಧಾನ ಅಜರಾಮರವಾಗಿ ಮಾಡಿ, ದೇಶಕ್ಕೂ ಇಟ್ಕೊಂಡಿರೋ ಜನಾಂಗ ಈಗ ಜಾತಕ ನೋಡಿಯೇ ಮದುವೆ ಮಾಡ್ತೀವಿ ಅಂದ್ರೆ, ನಾಚಿಗ್ಗೇಡು ! (ಅದೇ ತಪ್ಪಾದ್ದು. ಶಕುಂತಲೆ ಜಾತಕಾನ ಮದುವೆಗೆ ಮುಂಚೇನೇ ನೋಡಿದ್ರೆ, ಈ ದೇಶದಲ್ಲಿ ಇಷ್ಟು ಜನ ಕಳ್ಳ ಬಡ್ಡಿಮಕ್ಳು ಹುಟ್ತಾ ಇರ್ಲಿಲ್ಲಾಂತ ನಮ್ಮ ಶೀನಪ್ಪ ಗೊಣಗ್ತಾ ಇದೆ).

ಜ್ಯೋತಿಶಾಸ್ತ್ರ ಒಂದು ವಿಜ್ಞಾನ ಇರಬಹುದೂಂತ ಒಪ್ಕೊಂಡ್ರೂ, ನಮ್ಮ ದೇಶದಲ್ಲಿ ಸಧ್ಯ ಗ್ರಹಗತಿಗಳನ್ನು ತೀರ್ಮಾನ ಮಾಡೋಕೆ ಪ್ರಚಲಿತವಾಗಿರೋ ಪ್ರಕಾರಗಳು ತಪ್ಪು ಅನ್ನೋದನ್ನ ಶ್ರೀ ಚಕ್ರಪಾಣಿಯವರು "ನೇಸರು"ವಿನ ಜೂನ್ 89 ರ ಸಂಚಿಕೆಯಲ್ಲಿ ತಮ್ಮ ಬರಹದ ಮೂಲಕ ನಿಖರವಾಗಿ ತೋರಿದ್ದಾರೆ. ಧ್ರುವ ನಕ್ಷತ್ರವೇ ಬೇರೆಯಾಗುತ್ತಿದ್ದರೂ ಕೂಡ ಆದಿ ಶಂಕರಾಚಾರ್ಯರ ಕಾಲದಿಂದ ಇಲ್ಲಿಯವರಗೆ ತಮ್ಮ ಗಣಿತವನ್ನೇ ಬದಲು ಮಾಡದಿರುವ ಈ ಜ್ಯೋತಿಷಿಗಳು ಭವಿಷ್ಯವನ್ನೇನು ಕಾಣಬಲ್ಲರು.

ಗೊಡ್ಡು ನಂಬಿಕೆಗಳಿಗೆ ಲಡ್ಡು ಸಿದ್ಧಾಂತಗಳಿಗೆ ಹೊಸ ಹೊಸ ಸೋಗು ಹಾಕಿಕೊಂಡು ನಡೆಯೋ ನಮಗೆ ಈಗ ಕಂಪ್ಯೂಟರ್ ಹಾರೋಸ್ಕೋಪುಗಳು ರುಚಿಸಿವೆ. ಕುಲಾವಿ ಹೊಲದೇ ಹೊರತು ಕೂಸಲ್ಲ. "ಅಯ್ಯೋ ನಮ್ಮ ತಂದೆ ಕಾಲಕ್ಕೆ ನವು ಮನೇಲಿ ನಾಮ ಮಾಡರ್ನ್ ಆಗಿದ್ವಿ ಕಣ್ರೀ" ಅಂತ ಜಂಬ ಕೊಚ್ಕೋಳೋ ಹೆಂಗಳೆಯರು, ಎಕ್ಸಿಕ್ಯುಟಿವ್ ಛೇರು ಕಂಪ್ಯೂಂಟರ್, ಕಮೋಡ್‌ಗಳ ಮೇಲೆ ತಮ್ಮ ಜುಟ್ಟುಗಳನ್ನ ಅಡಗಿಸಿಟ್ಟುಕೊಂಡು ಕೂತಿರೋ ವೀರಾಧಿವೀರರು ಇಬ್ಬರೂ, ತಮ್ಮ ಮಗನ ಮದುವೆಯ ಸಮಯದಲ್ಲಿ ಈ ನಿಜವನ್ನು ಅರಿತು ನಡೆಯೋತನಕ ನಮ್ಮ "ಹಿಂದೂ" ಸಮಾಜ ಹಿಂದೇ ಉಳಿದಿರುತ್ತೆ.

*********

## ಶ್ರೀ ಬಿ.ಎನ್. ಶ್ರೀಕೃಷ್ಣ



1941 ನೆಯ ಇಸವಿಯಲ್ಲಿ ಹುಟ್ಟಿದ ಶ್ರೀ ಕೃಷ್ಣ ಅವರು ಮೈಸೂರು ಅಸೋಸಿಯೇಷನ್ನಿನ ಉಪಪೋಷಕರಾಗಿದ್ದ ಕೈ. ಶ್ರೀ ಬಿ.ನಾರಾಯಣ ಸ್ವಾಮಿ ಮತ್ತು ಶ್ರೀಮತಿ ಶಾರದಮ್ಮನವರ ಮೂರನೆಯ ಮಗ. ವಿಜ್ಞಾನದ ವಿದ್ಯಾರ್ಥಿಯಾಗಿದ್ದರೂ ಸಹಿತ ತಂದೆಯ ಹೆಜ್ಜೆಯಲ್ಲಿಯೇ ನಡೆಯಲು ಬಯಸಿ 1960 ರಲ್ಲಿ ಎಲ್.ಎಲ್.ಬಿ. ಗೆ ದಾಖಲಾಗಿ ಅದರ ತರುವಾಯ 1962 ರಲ್ಲಿ ಮುಂಬಯಿಯ ಹೈ ಕೋರ್ಟ್‌ನಲ್ಲಿ ತಮ್ಮ ಲಾ ಉದ್ಯೋಗವನ್ನು ಮೊದಲು ಮಾಡಿದರು. ಆಮೇಲೆ ಭಾರತದ ಸುಪ್ರೀಂ ಕೋರ್ಟಿನಲ್ಲಿಯೂ ತಮ್ಮ ವಕಾಲತ್ತನ್ನು ಬೆಳಸಿ ಮುಂಬಯಿಯ ಅಗ್ರಗಣ್ಯ ಆಡ್ವೋಕೇಟ್‌ಗಳಲ್ಲಿ ಒಬ್ಬರೆನಿಸಿದರು. ಲೇಬರ್ ಲಾ ಅನ್ನು ಕುರಿತು ಬಹಳಷ್ಟು ಪರಣತಿಯನ್ನು ಪಡೆದ ಶ್ರೀ ಕೃಷ್ಣ ಕೇವಲ ಕಾನೂನು ಕ್ಷೇತ್ರವಷ್ಟೇ ಅಲ್ಲದೇ , ಧಾರ್ಮಿಕ, ವಿದ್ಯಾಕ್ಷೇತ್ರಗಳಲ್ಲಿಯೂ ವಿಶೇಷ ಆಸಕ್ತಿಯುಳ್ಳ ವ್ಯಕ್ತಿ, ನ್ಯಾಷನಲ್ ಕನ್ನಡ ಎಜ್ಯುಕೇಷನ್ ಸೊಸೈಟಿಯ ಅಧ್ಯಕ್ಷರಾಗಿ ಶ್ರೀ ಶಂಕರಮಠ ಶ್ರೀ ಷಣ್ಮುಖಾನಂದ ಸಂಗೀತ ಮತ್ತು ಲಲಿತ ಕಲಾ ಸಭಾದ ವಿಶ್ವಸ್ಥಗಾರರಾಗಿ ದುಡಿಯುತ್ತಿದ್ದಾರೆ.

ಹಲವಾರು ವರ್ಷಗಳಿಂದ ಮೈಸೂರು ಅಸೋಸಿಯೇಷನ್ನಿನ ಗೌ. ಕಾನೂನು ಸಲಹೆಗಾರರಾಗಿ ಸಂಸ್ಥೆಗೆ ನೆರವಾಗಿದ್ದಾರೆ. ಸಂಸ್ಥೆಯ ಕಾರ್ಯಕಲಾಪಗಳಲ್ಲಿ ಕೇವಲ ತಾವೊಬ್ಬರೇ ತೊಡಗದೆ ತಮ್ಮ ಮನೆಯವರನ್ನೆಲ್ಲಾ ತೊಡಗಿಸುವುದು ಇವರ ವೈಶಿಷ್ಟ್ಯ . ಹೀಗಾಗಿ ಶ್ರೀಮತಿ ಪೂರ್ಣಿಮಾ, ಕು. ಸುಷ್ಮಾ, ಕು.ಸೌಮ್ಯ ಅಸೋಸಿಯೇಷನ್ನಿನ ಎಲ್ಲಾ ಕ್ಷೇತ್ರಗಳಲ್ಲಿ ಚಟುವಟಿಕೆಯಾಗಿದ್ದಾರೆ.

ಸಂಸ್ಕೃತ ಸಾಹಿತ್ಯ ಮತ್ತು ವೇದೋಪನಿಷತ್ತುಗಳಲ್ಲಿ ವಿಶೇಷ ಆಸಕ್ತಿಯುಳ್ಳ ಶ್ರೀ ಕೃಷ್ಣ ಅವರು ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಎಂ.ಎ. ಪದವೀಧರರು.

ಅವರೀಗ ಮುಂಬಯಿಯ ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕವಾಗಿದ್ದಾರೆ. ಶ್ರೀ ಕೃಷ್ಣ ಅವರಿಗೆ ನೇಸರು'ವಿನ ನಲು ಹಾರೈಕೆಗಳು. ಅವರ ನೇತೃತ್ವದಲ್ಲಿ ಮುಂಬೈ ಉಚ್ಚ ನ್ಯಾಯಾಲಯ ತನ್ನ ಮೊದಲಿನ ಹೆಗ್ಗಳಿಕೆಯನ್ನು ಮತ್ತೆ ಪಡೆಯುವುದರಲ್ಲಿ ಸಂಶಯವಿಲ್ಲ.

– ಸಂ.

# ADVANTAGES AND DISADVANTAGES OF DRUG DOSAGE FORMS

- NAGESH BELWADI

The word medicine brings into ones mind an image of tablets, injections, syrups, ointments etc. These various forms in which a medicament is administered to a patient are called the dosage forms of the drug.

Why are so many dosage forms required ? For a medicament to act it must reach the site of action. This means that the drug should be absorbed into the blood stream and be transported to the appropriate organ or tissue, penetrate the concerned cellular/sub cellular structure and produce the desired effect of either killing the disease causing (Pathogenic) micro organism or restore the physiological process to normalcy.

When this is the purpose, depending upon various factors such as (1) the speed of action, desired, (2) chemical interaction of the medicament with the various body fluids or secretions in the process of reaching the site of action, (3) rate obsorption of the medicament, (4) duration of the action of medicament (5) side effects and (6) convenience and comfort of the patient, differenct dosage forms become necessary as it provides the physician options to choose from, depending upon the severity and other factors of each case. Further different routes through which medicaments can be administered also call for different dosage forms. Let us have a look at the various of administrations and the different dosage forms involved.

**Oral route :**

Administering a medicine by mouth is perhaps the most convenient and common. The medicament is absorbed into the blood stream and reaches the site of action. This is generally suited where the absorption of the drug is high enough to produce sufficient concentrations in blood. It has the limitation that it cannot be given to patients in critical conditions where immediate action is necessary, or in patients who are unconcious.

The dosage forms used by this route are tablets, capsules, syrups, suspensions, granules etc. Tablets Contain specific amount of the medicaments. Since the medicament is in small quantity inert substance which give volume to the tablet and disintegrants which help the tablet to break in to small fragments for rapid absorption are added. When the tablet is swallowed, it disintegrates and allows the medicament to be absorbed rapidly so that desired action is produced.

The blood levels produced by a tablet depend upon the level of absorption of the medicament used, duration for which it is retained in the blood stream. Hence repeating of the dose at specified intervals are necessary to maintain desired blood levels.

Capsules are simple devices in which medicament is enclosed in a gelatone shell. When swallowed the gelatine shell dissolves and releases the medicament. Here no disintegrant is necessary. Generally capsule is prefered where the medicament has a bitter and unpalatable taste.

**Sustained Release Tablets/Capsules :**

Where repeated dosages are to be taken, say every 4 or 6 hours, keeping the patients convenience in view tablets or capsules are made where a fixed dose of medicine is released at fixed intervals of time. These preperations offer the convenience that the patient can take 1 capsule/tablet in 12 - 24 hours as against normally taking 3 - 6 tablets. Such tablets/ capsules are known as sustained release or timed release preperations.

**Syrups Suspensions :**

Particularly useful in the treatment of children, syrups contain the medicament added into a sweet and flavoured base. Palatability is the chief advantage. Suspension are preperations in which insoluble solids and suspended in a sweetened, flavoured base. It is important that suspensions are shaken well before use as other wise the dosage in each measure can vary.

**Granules :**

Where the quantity to be administered is large and can not be put in the form of caps. or tablets they are administered as granules.

**Parenteral Route :**

Commonly used medical term to denote the route of injections. Injectables produce rapid response as they are rapidly absorbed. Injections cannot be only be given below the skin or into the muscles from where the drug is absorbed, but can also be given directly into the blood stream in critical conditions. In view of their direct access to the various tissurs of the body, injectables have to be manufactured with great care and have to be totally sterile.

**Topicals:**

Preparations meant for external applications are called Topicals. Ointments, Gels, Lotions, Creams, plasters etc. are administered by this route. In all these preperations, desired quantity of medication is blended with suitable base. When applied on the body, the drug is absorbed by the skin or other membranes. Preperations meant for the eye again have to be totally sterile as the tissues in the eye are very delicate and prove to infections easily.

**Rectal Route :**

Where certain drugs are not well tolerated orally, they are administered rectally in the form of suppositories. Suppositories are preperations which when administered, melt at the body temperature and release the medicaments. Enemas are also available as suppositories.

Thus we see the kind of option the physician has. In the case of a severe infection, he may start with injections of the chosen drug to produce desired blood levels immediately, to be followed by course of tablets or capsules, once the situation is brought under control.

As the understanding of the working of human system gets better and better, drug delivery system is being made more and more. Specific newer modes like implants which when implanted in the system, release the medicines at slow rate over a long period are being tried out. Trans dermal applications, where the patient wears a plaster with a fixed dose of medicament which is released slowly over a period of time are in usage.

Thus different dosage forms provide the physician means to determine the right amount of drug to be administered based on the invidisualised requirements of each patient.

# ರಾಗ ದ್ವೇಷ

- ವಾಸುದೇವ ಕಾಣೆಮಾರ್ ಮುಂಬಯಿ.

ನಮ್ಮ ಐದು ಜ್ಞಾನೇಂದ್ರಿಯಗಳೂ (ಕಣ್ಣು, ಕಿವಿ, ಇತ್ಯಾದಿ ) ಐದು ಕರ್ಮೇಂದ್ರಿಯಗಳೂ ( ಕೈ, ಕಾಲು, ಬಾಯಿ, ಪಾಯು ಮತ್ತು ಗುಹ್ಯಗಳು ) ಮೂರು ಸೂಕ್ಷ್ಮ ತತ್ವಗಳೂ ( ಮನಸ್ಸು , ಬುದ್ಧಿ, ಮತ್ತು ಹಮ್ಮು ) ಇವುಗಳೆಲ್ಲ ಪ್ರಿಯವಾದ ಪರಸತ್ವದೊಡನೆ ಜೀವನ ಸಂಯೋಗವನ್ನು ಸಾಧಿಸಿ ಆನಂದಿಸದೆ ಬಹುಕಾಲ ತಮತಮಗೆ ಪ್ರಿಯವೆನಿಸಿ ಕಾಣುವ ಬಾಹ್ಯವಸ್ತುಗಳ ಮಿಥ್ಯ ಆಕರ್ಷಣೆಗೆ ಒಳಗಾಗುತ್ತವೆ. ಇದಕ್ಕೆನ್ನುವರು ರಾಗದ ಸೆಳೆತ. ಅಂತೆಯೇ ಅಪ್ರಿಯವಾದ ವಸ್ತುಗಳಿಗೂ ಅಂಟಿಕೊಂಡು ಘರ್ಷಿಸುತ್ತಿರುತ್ತವೆ. ಅದಕ್ಕೆನ್ನುವರು ದ್ವೇಷ ಹರಿವುದೆಂದು. ಈ ರಾಗದ್ವೇಷಗಳೇ ನಮ್ಮನ್ನು ಭವ ( ಸಂಸಾರ ) ಬಂಧನದಲ್ಲಿಡುತ್ತವೆ. ರಾಗ ದ್ವೇಷಗಳು ಪ್ರಿಯಪ್ರಿಯಗಳಾಗಿ ವಸ್ತುಗಳಂತೆ ಉಳಿದಿರುವಾಗ ಇವುಗಳ ಪ್ರಾಬಲ್ಯವು ನಮಗೆ ಅಷ್ಟೊಂದು ಗೋಚರಿಸುವುದಿಲ್ಲ. ಸೌತೆಕಾಯಿ , ಬೇಕಾದರೇನಾಯಿತು ? ಹಾಗಲಕಾಯಿ ನಮಗೆ ಬೇಡವೆಂದರೇನಾಯಿತು ? - ಯಾರದೂ ಏನೂ ಕೊಳ್ಳೆ ಹೋಗದು. ಆದರೆ ಇವೇ ರಾಗದ್ವೇಷಗಳು ವ್ಯಕ್ತಿಗತವಾದಾಗ ಇವುಗಳು ನಮ್ಮನ್ನು ಬಹುವಾಗಿ ಬಂಧಿಸುತ್ತವೆ.

ನಾನು ನನ್ನ ಪತ್ನಿ, ಪುತ್ರ, ತಾಯಿ, ತಾತ, ಮಿತ್ರ, ಬಂಧು, ಸೇವಕ, ಇತ್ಯಾದಿ ನನ್ನ ಪರಿವಾರವನ್ನು ತೀವ್ರವಾಗಿ ಪ್ರೀತಿಸುತ್ತೇನೆ. ಇದು ನನ್ನ ವ್ಯವಹಾರಕ್ಕೆ ಇತಿಮಿತಿ ತಂದೊಡ್ಡುತ್ತದೆ. ಪ್ರಿಯರನ್ನು ಬಿಟ್ಟಿರಲು ಇಚ್ಛಿಸುವುದಿಲ್ಲ. ಅಪ್ರಿಯರಂತೆ ಕಾಣಿಸಿಕೊಂಡ ಪರರನ್ನು ಬಿಡುತೇನೆ. ಇದು ಬಾಲಿಷವಾದ ಪ್ರಕೃತಿಗುಣವೇನೋ ಹೌದು. ವಯಸ್ಕರೂ ಇದಕ್ಕೆ ಅಪವಾದವಲ್ಲ. ಪ್ರಿಯರಿಗೆ ಅಪ್ರಿಯವಾಗುವುದನ್ನು ನಾನು ಸಹಿಸುವದಿಲ್ಲ. ಅವರಿಗೆ ತೊಂದರೆಯಾದರೆ ನಮಗೆ ಹಾನಿಯಾದಂತೆ. ಅವರ . ಅಗಲುವಿಕೆಯನ್ನು ನೆನೆಯಲೂ ನಮ್ಮ ಮನಸ್ಸು ಕೇಳದು. ಏನೋ ಅವರ ಕುರಿತು ಇಚ್ಛೆ. ಮತ್ತು ಅವರಿಗೆಲ್ಲ ಏನಾದೀತೋ ಎಂಬ ಭಯವು ಕೂಡಾ ಹಿತೈಷಿ ತನವೇನೋ ಒಳ್ಳೆಯದಾದರೂ ಸ್ವಾರ್ಥದ ಹಿತೈಷಿತನವು ಮಾತ್ರ ರಕ್ತಪಿಪಾಸುವಾಗಿದ್ದಾಗಿರುತ್ತದೆ. ಅನುರಾಗವು ಮಮತೆಯಂತೆ ಸ್ಥಿರವಲ್ಲ. ಅದು ಹರಿಯುವುದು ರಕ್ತನಾಳಗಳಲ್ಲಿ. ರಾಗವು ಹುಚ್ಚು ಹೊಳೆಯಂತೆಯೇ ಇದೆ.

ದ್ವೇಷದ ಸ್ವಭಾವವೂ ರಾಗದಂತೆಯೇ ಯಾವನನ್ನೋ ಯಾವುದೋ ಒಂದು ಸಂದರ್ಭದಲ್ಲಿ ದ್ವೇಷಿಸುತ್ತೇವೆ. ಒಮ್ಮೆ ದ್ವೇಷವು ಹುಟ್ಟಿತೆಂದರೆ ಬಡಪೆಟ್ಟಿಗೆ ಸುಮ್ಮನೆ ಬಿಟ್ಟು ಹೋಗುವದಿಲ್ಲ. ಪ್ರೀತಿಸುವವನನ್ನು ಎಷ್ಟು ನೆನಸಿಕೊಳ್ಳುತ್ತವೆಯೋ ದ್ವೇಷಿಯನ್ನು ಹಾಗೆಯೇ ಬಹಳಷ್ಟು ನೆನೆದುಕೊಳ್ಳುತ್ತೇವೆ. ದ್ವೇಷವೆನ್ನುವುದು ಅಗ್ನಿಯಂತೆ ಮನಸ್ಸಿನಲ್ಲಿ ಹೊಗೆಯಾಡುತ್ತಲೇ ಇರುತ್ತದೆ. ಬಹುದೀರ್ಘವಾಗಿ ದ್ವೇಷವನ್ನು ಮುಂದುವರಿಸಿ ಅದನ್ನು ಸಾಧಿಸುವವರಿದ್ದಾರೆ. ರಾಗವೆಂಬುದು ಮೋಹಿನಿಯಾದರೆ ದ್ವೇಷವೊಂದು ಪಿಶಾಚಿ. ಈ ಎರಡೂ ಹಿಡಿದಾಗ ಸುಲಭವಾಗಿ ಬಿಟ್ಟುಹೋಗತಕ್ಕದ್ದಲ್ಲ.

ರಾಗ ದ್ವೇಷಗಳೆರಡೂ ಮನುಷ್ಯನ ಶತ್ರುಗಳೇ ಇಷ್ಟ ವಿಷಯಗಳಲ್ಲಿ ಅಸಂಗತವಾದ ರಾಗ ಮತ್ತು ಅನಿಷ್ಟ ವಿಷಯಗಳಲ್ಲಿ ಅಸಂಬದ್ಧವಾದ ದ್ವೇಷ ಇವೆರಡೂ ಜ್ಞಾನೇಂದ್ರಿಯ ಮತ್ತು ಸೂಕ್ಷೇಂದ್ರಿಯಗಳಿಂದ ನಮ್ಮ ಕರ್ಮಗಳಲ್ಲಿ ಬಂದು ಕುಳಿತು ಕೊಂಡಿರುತ್ತದೆ. ವಿಷಯಗಳಲ್ಲಿ ಕೂತಿರುತ್ತವೆ. ವಿಷಯವಾಸನೆಯಾಗ ನಮ್ಮನ್ನು ಬಿಡುವುದೇ ಇಲ್ಲ.

ಗೌತಮ ಬುದ್ಧನು ಹೇಳುತ್ತಾನೆ - ದೇಹದೊಳಗಿನ ದೋಷಯುಕ್ತ ರಾಗವನ್ನು ತೆಗೆದು ಕಳೆ- ಎಂದು ನೀರಲ್ಲಿ ತೇಲುವ ನಾವೆಯೊಳಗೆ ನೀರು ತುಂಬಿದರೆ ಅದೂ ಅವರೊಡನೆ ನಾವು ಮುಳುಗುವ ಸಂಭವವಿರುವುದರಿಂದ ನಾವೆಯೊಳಗಿನ ಸೂರಿನ ನೀರನ್ನೂ ಹೊರ ಹಾಕಬೇಕು ಮತ್ತು ಸೂರನ್ನು ಮುಚ್ಚಿಸಬೇಕು.

ದ್ವೇಷವು ಕಟ್ಟೆ ಬಿದ್ದ ಕೆಟ್ಟ ಗ್ರಹಚಾರದಂತೆ ಅದನ್ನು ಕತ್ತರಿಸಬೇಕು. ಒತ್ತರಿಸಬೇಕು. ಶಮನ ಮಾಡದಿದ್ದರೆ, ಅದು ಕಾಳ್ಗಿಚ್ಚಾದೀತು. ದ್ವೇಷಕ್ಕೆ ಸಮನಾದ ದೋಷವಾಗಲೀ ಹೊಲಸಾಗಲೀ ಬೇರೊಂದಿಲ್ಲ.

ಜಾಜಿಯ ಗಿಡವು ತನ್ನಲ್ಲಿ ಬೆಳೆದು ಬಾಡಿ ಹೋಗುವ ಹೂಗಳನ್ನು ತನ್ನಿಂದ ತಾನೇ ಸರಿಕಾಲದಲ್ಲಿ ಉದುರಿಸುವ ಹಾಗೆ ರಾಗದ್ವೇಷಗಳನ್ನು ಕಳಚಿ ಬಿಡಬೇಕು.

ಬಿರುಕು ಮಾಡಿದ ಮನೆಗೆ ಮಳೆಯು ನುಗ್ಗುವಂತೆಯೇ ಚೆನ್ನಾಗಿ ಸುಸಂಸ್ಕೃತವಾದ ಚಿತ್ತದಲ್ಲೂ ( ಮನಸ್ಸಿನ ಚೌಕಟ್ಟಿನೊಳಗೆ ) ರಾಗವು ನುಗ್ಗುವದು. ಚೆನ್ನಾಗಿ ಹೊಂದಿಸಿ ಜೋಡಿಸಿದ ಮಾಡಿರುವ ಮನೆಯೊಳಗೆ ಮಳೆನೀರು ನುಗ್ಗಲಾರದಂತೆ ಸಂಭಾವಿತವಾದ ಚಿತ್ತದಲ್ಲಿ ರಾಗವು ಒಳನುಗ್ಗದು.

ರಾಗದಿಂದ ಬಾಳುವೆಯು ಪರಿಚ್ಛೇದಗಳಾಗಿ ಕೊಂಬೆ ರೆಂಬೆಗಳಾಗಿ ಒಡೆದೊಡೆದಾಗ ಟೊಳ್ಳು ಬಿದ್ದು ಪೂರಾ ಹಾಳಾಗಿ ಹೋಗುವದು. ರಾಗವನ್ನು ಕತ್ತರಿಸಬೇಕಾದರೆ ಪೂರೆ ಪೂರೆಯಾಗಿ ಬೆಳೆದ ವನವನ್ನೇ ಕತ್ತರಿಸದಿರಬೇಕು. ಹಾಗೆಂದರೆ ನಮ್ಮ ಬಾಳುವೆಯ ವೃಕ್ಷವನ್ನೇ ಕತ್ತರಿಸದಿರಬೇಕು. ವೃಕ್ಷವೊಂದರಿಂದೇನು ಭಯ ? ಶಾಖೋಪಶಾಖವಾಗಿ ಸೊಕ್ಕಿ ಬೆಳೆದ ವನದಿಂದ ತಾನೇ ಭಯ ಹುಟ್ಟುವುದು ! ರಾಗಗಳು ವನದಂತೆ ಯಾವನು ಒಂದು ವನದಿಂದ ಪಾರಾಗಿ ಇನ್ನೊಂದಕ್ಕೆ ಓಡಿ ಹೋಗುವನೋ ಅವನು ಮುಕ್ತನಲ್ಲ. ಬಂಧನಕ್ಕೊಳಗಾದವನು.

ಕಬ್ಬಿಣದಿಂದಾಗಲೀ ಮರದಿಂದಾಗಲೀ ನಾರು ಹಗ್ಗದಿಂದಾಗಲೀ ಆಗುವ ಬಂಧನವನ್ನು ಧೀರರು ದೃಢವೆಂದು ಬಗೆಯುವದಿಲ್ಲ. ಮಣಿಕುಂಡಲಗಳಲ್ಲಿ ಅತಿಮಯಮತೆಯನ್ನು ಹೆಂಗಸು ತಾಳುವಂತೆ ಸಂಸಾರಿಯು ಮಮಕಾರದಲ್ಲಿ ಬಲವಾದ ಬಂಧನವನ್ನು ಹೊಂದಿರುತ್ತಾನೆ. ಈ ಬಂಧನವು ತನಗೆ ಸಿಕ್ಕದವರನ್ನು ಕೆಳಗೆ ಎಳೆದು ಹಾಕುವದು, ಶಿಥಿಲಗೊಳಿಸುವದು. ಇದನ್ನು ಬಿಡಿಸುವದು ಕಠಿಣ. ರಾಗಗಳಲ್ಲಿ ಆಸಕ್ತರಾದವರು ಸಂಸಾರದ ಹುಚ್ಚುಹೊಳೆಗೆ ಬೀಳುವರು. ಜೇಡವೊಂದು ತಾನೇ ರಚಿಸಿದ ಬಲೆಯಲ್ಲಿ ಹೇಗೆ ಜೋತು ಬೀಳುವದೋ ಹಾಗೆಯೇ ಸಿಲುಕಿಕೊಳ್ಳುವದು.

ಪ್ರಿಯದಿಂದ ಶೋಕವು, ಭಯವೂ ಹುಟ್ಟುವದು. ಪ್ರೇಮಿಸುವಾಗಲೂ ಹಾಗೆಯೇ ಆಗುವದು, ರತಿ, ಕಾಮ, ತೃಷೆಯಿಂದಲೂ ಹಾಗಾಗುವದು. ಆದುದರಿಂದ ಪ್ರೀಯರೊಡ ನಾಗಲೀ ಅಪ್ರಿಯರೊಡನಾಗಲಿ ಹೆಚ್ಚಿಗೆ ಮಾತ್ರವಲ್ಲ ಸೇರಲೇ ಬಾರದು. ಅಂಟಿನ ನಂಟೇ ಬೇಡ.

ಪ್ರಿಯರನ್ನು ಕಾಣದಿರುವುದು, ಅಪ್ರಿಯರನ್ನು ಕಾಣುವುದೂ ದುಃಖ. ಆತ್ಮನನ್ನು ಆಯುಕ್ತವಾದುದರಲ್ಲಿ ಕೂಡಿಸಬಾರದು. ಅದಕ್ಕೆ ಬೇಕು ಪರಮಾತ್ಮನ ಸಾನ್ನಿಧ್ಯ. ಸದರ್ಥವನ್ನು ಬಿಡಬಾರದು. ಪ್ರಿಯರನ್ನು ತಾನಾಗಿ ಮಾಡಿ ಕೊಳ್ಳುವುದು ಬೇಡ, ತಾನಾಗಿ ಕಳೆದು ಕೊಳ್ಳುವದು ಬೇಡ, ಎಲ್ಲ ಭಗವದಿಚ್ಛೆಯೆಂದು ಪ್ರಿಯಾ ಪ್ರಿಯಗಳನ್ನು ನಿರ್ಲಿಪ್ತವಾಗಿ ಅನುಭವಿಸಬೇಕು.

(ಕೆಲವೊಂದು ಆಧಾರ ' ಧರ್ಮಪದ 'ದಿಂದ )

## ಪ್ರಬಂಧ ಸ್ಪರ್ಧೆ

ಭಾಭಾ ಪರಮಾಣುಕೇಂದ್ರದ ಕನ್ನಡ ಸಂಘವು ಈ ಸಾಲು ಕರ್ನಾಟಕ ರಾಜ್ಯೋತ್ಸವದ ಸ್ಪರ್ಧೆಯೊಂದನ್ನು ಆಯೋಜಿಸಿದೆ
ವಿಷಯಃ "ಸಧ್ಯದಲ್ಲಿ ಮುಂಚೂಣಿಯಲ್ಲಿರುವ ವಿಜ್ಞಾನ ಮತ್ತು ತಂತ್ರ, ಜ್ಞಾನ ಪ್ರಭೇದಗಳು" ( Thrust Areas in Science & Technology)

ಈ ಸ್ಪರ್ಧೆಗೆ ಮುಕ್ತ ಪ್ರವೇಶವಿದ್ದು, ಭಾಗವಹಿಸುವವರು ಫುಲ್ ಸ್ಕೇಪ್ ಪುಟದ ಒಂದೇ ಮಗ್ಗುಲಲ್ಲಿ 8-10 ಹಾಳೆಗಳಿಗೆ ಮೀರದಂತೆ ತಮ್ಮ ವೈಜ್ಞಾನಿಕ ಲೇಖನವನ್ನು ಸಿದ್ಧಗೊಳಿಸಿ ಕೆಳಗೆ ಸೂಚಿಸಿದ ವಿಳಾಸಕ್ಕೆ ತಾ॥15-9-1990 ರ ಒಳಗೆ ಅದು ತಲುಪುವಂತೆ ಕಳಿಸಬೇಕು.

Dr H. S. Gadiyar
Chariman, Kannada Sangha
Metallurgy Division,
B. A. R. C Bombay - 400 085.

ಪ್ರಬಂಧ ಜೊತೆಗೆ ಪ್ರತ್ಯೇಕ ಹಾಳೆಯಲ್ಲಿ ಲೇಖಕರ ವಿಳಾಸದ ಹಾಗೂ ವಿದ್ಯಾರ್ಥಿ ಸ್ಪರ್ಧಾಳುವಾಗಿದ್ದಲ್ಲಿ ಸಂಬಂಧಿಸಿದ ಶೈಕ್ಷಣಿಕ ಸಂಸ್ಥೆಯ ಮುಖ್ಯೋಪಾಧ್ಯಾಯರಿಂದ ಪ್ರಾಂಶುಪಾಲರಿಂದ ಪಡೆದ ಸಮರ್ಥನಾ ಪತ್ರವನ್ನು ಲಗತ್ತಿಸುವುದು ಅವಶ್ಯವಾಗಿದೆ. ಸ್ಪರ್ಧೆಯಲ್ಲಿ ಯಶಸ್ವಿಯಾದ ಬರಹಗಳನ್ನು ಕನ್ನಡ ಸಂಘದ ಮುಖಪತ್ರಿಕೆಯಾದ "ಬೆಳಗು" ವಿನಲ್ಲಿ ಪ್ರಕಟಿಸಲಾಗುತ್ತದೆ.

ಪ್ರಥಮ ಬಹುಮಾನ ರೂ. 500-00
ದ್ವಿತೀಯ ಭಹುಮಾನ ರೂ. 300-00
ಪ್ರೋತ್ಸಾಹಕರ ಬಹುಮಾನ ರೂ.100-00

Regn. No. 040015/86
Regn. No. MH/BY/NE121/89

# How well do you Get along with Others?

HOW WELL DO WE CET ALONG WITH OTHERS?

Our day to day activities involves dealings/interactions with other human beings. These interactions can be a source to happiness, peace of mind, a sense of fulfilment and an inspiration for furthering the achievements. With willingness to learn, and with constant practice, one can develop skills in human relations. Here are a few guidelines.

_ Each person is different & unique. Two persons can never think alike. Hence never expect the other person to think & feel exactly as you think and feel.

- There is a craving in every human being to seek appreciation from others. If one cannot appreciate others, at least let one not hurt others ego.

- In life we seldom appreciate the good things we have. It has been observed that one can never appreciate others unless he appreciates himself for whatever he is

- When people talk, seperate facts from opinions so that a right decision is reached.

- Whatever has happened cannot be undone. Unpleasent experi ences leave bitter feelings. One should not allow the bitter feelings of the past to overshadow the present and make it miserable.

- Most of the time we alk about our grievances to people other than the concerened persons. Communicating to the concerened persons will clear most of the misund erstandings and avoid unn cessary gossips. Also we have to communicate to some one who can do something about it.

- Hatred, anger, jealousy, guilt, worry and resentment are some of the emotions which take up most our energies, occupy most of our thinking, and most of our time. All these emotions are originating from what has already happened (past) and they exist in minds. What has happened cannot be changed.

- Most of the time, we take other people's nature for granted. Accepting each other with a positive attitude makes our interaction with them enjoyable.

- Many times we give promises, without actually meaning them. We do not realise that we are not honouring our own words. When we cannot honour our own words, how can we expect others to respect our words.

- Often, when we are not successful, we tend to blame others and forget to look within ourselves for remedies. If we begin to look at our strengths and weaknesses objectively, we will be able to surmonnt the obstacles and march ahead. We will learn not to harbour subjective ill feelings about others.

---------- S. MOHAN.

***************

MATRIMONIAL

WANTED A GOOD LOOKING BRIDE FROM MADHWA/DESHASTHA BRAHMIN FAMILY, NON-HARITA GOTRA FOR A BOY EMPLOYED IN GOV. GONCERN IN BOMBAY. GIRL SHOULD BE A GRADUATE AND SHOULD NOT BE OVER 23 YEARS.

CONTACT : SHRI. R.H. KULKARNI, 473/9, BADAGI BUILDING, VENKATPETH, BAGALKOT - 587 101 (KARNATAKA)

@@@@@@@@@@@

## ಕನ್ನಡ ವನಿತಾ ಸಮಾಜ

ಕನ್ನಡ ವನಿತಾ ಸಮಾಜವು ೧೯೬೬ರಲ್ಲಿ ಸ್ಥಾಪಿತವಾಯಿತು. ಈ ೨೪ ವರ್ಷಗಳಲ್ಲಿ ಸಮಾಜವು ಮಹಿಳೆಯರ ಮತ್ತು ಮಕ್ಕಳ ಏಳಿಗೆಗಾಗಿ ಹಲವಾರು ಯೋಜನೆಗಳನ್ನು ಹಾಕಿಕೊಂಡು ಸಫಲವಾಗಿ ನಡೆಸಿಕೊಂಡು ಬಂದಿದೆ. ಈ ವರ್ಷ ಸಮಾಜವು ತನ್ನ ಬೆಳ್ಳಿಹಬ್ಬವನ್ನು ಆಚರಿಸುತ್ತಿದೆ. ಈ ಆಚರಣೆಯ ಅಂಗವಾಗಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸಮಾಜದ ಪ್ರಧಾನ ಕಾರ್ಯದರ್ಶಿನಿಯಾಗಿ ನಿಸ್ವಾರ್ಥ ಸೇವೆ ಮಾಡಿದ ಕನ್ನಡದ ಕತೆಗಾರ್ತಿ ಶ್ರೀಮತಿ ರುಕ್ಮಿಣಿ ಗದಗಕರ್ ಅವರ ಸ್ಮರಣಾರ್ಥವಾಗಿ ಒಂದು ಕನ್ನಡ ಏಕಾಂಕ ನಾಟಕ ರಚನಾ ಸ್ಪರ್ಧೆಯನ್ನು ಮಹಿಳೆಯರಿಗಾಗಿ ಏರ್ಪಡಿಸಿರುತ್ತಾರೆ. ಮಕ್ಕಳಿಗಾಗಿ ನವರಸಾಭಿನಯ ಸ್ಪರ್ಧೆಯನ್ನೂ, ಬೇರೆ ಬೇರೆ ತಂಡಗಳು ಭಾಗವಹಿಸುವ ನಾಟಕೋತ್ಸವವನ್ನು, ಮುಂದೆ ಮನರಂಜನಾ ಕಾರ್ಯಕ್ರಮವಾಗಿ ಆನಂದ ಮೇಳವನ್ನು ಇಟ್ಟುಕೊಳ್ಳುವವರಿದ್ದಾರೆ.

ಕನ್ನಡ ಏಕಾಂಕ ನಾಟಕ ರಚನಾ ಸ್ಪರ್ಧೆಯಲ್ಲಿ ಭಾಗವಹಿಸುವ ಮಹಿಳೆಯರಿಗಾಗಿ ಕೆಲವು ನಿಯಮಗಳನ್ನು ಸೂಚಿಸಿದ್ದಾರೆ. ವಿವರಗಳಿಗಾಗಿ ಸಮಾಜದ ಕಾರ್ಯಾಲಯವನ್ನು ಸಂಪರ್ಕಿಸಬಹುದು. ಸ್ಪರ್ಧೆಯಲ್ಲಿ ಆಯ್ಕೆಗೊಂಡ ನಾಟಕಗಳಿಗೆ ಮೂರು ಬಹುಮಾನಗಳನ್ನು ಕೊಡಲಾಗುವುದು. ಪ್ರಥಮ ಬಹುಮಾನ : ರೂ ೫೦೧ - ೦೦, ಎರಡನೆಯ ಬಹುಮಾನ ರೂ ೩೦೧ - ೦೦, ಮೂರನೆಯ ಬಹುಮಾನ ರೂ ೨೦೧ - ೦೦.

ಸಮಾಜದ ವಿಳಾಸವು ಈ ಕೆಳಗಿನಂತಿದೆ :

ಕನ್ನಡ ವನಿತಾಸಮಾಜ, ೫೦೧ "ತ್ರೀ ವ್ಯೂ", ವೀರ ಸಾವರಕರ ಮಾರ್ಗ, ಪ್ರಭಾದೇವಿ, ಮುಂಬಯಿ ೪೦೦೦೨೫.
Tel : 4224175.

Edited, Printed & Published by M. A. N. Prasad on behalf of the Mysore Association Bombay Printed at Tangson Printers, Belgaum - 590 001. Phone : 24188.